ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.1852/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಗದೀಶ್ ಡಿ.ಹೆಚ್. | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ಹಾಲಪ್ಪಶೆಟ್ಟಿ | ಸಿ.ಡಬ್ಲ್ಯೂ.6 |
| ವಯಸ್ಸು | : | 43 ವರ್ಷ | |
| ವೃತ್ತಿ | : | ಡಾಕ್ಯೂಮೆಂಟ್ ರೈಟರ್ | |
| ವಾಸ | : | ಕುರುವಂಗಿ | |

ದಿನಾಂಕಃ 23-06-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಪ್ರಭಾರ ಎಪಿಪಿ ರವರಿಂದಃ-

ನಾನು ಕಳೆದ 16 ವರ್ಷದಿಂದ ಡಾಕ್ಯೂಮೆಂಟ್ ರೈಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಿಪಿ-2 ರಲ್ಲಿ ಇರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ರಯಪತ್ರ ಇರುತ್ತದೆ. ದಿಃ07.01.2016 ರಂದು ಧನಲಕ್ಷ್ಮಿ ಎನ್ನುವವರಿಂದ ಸುಬ್ರಹ್ಮಣ್ಯ ಎನ್ನುವವರು ಚಿಕ್ಕಮಗಳೂರಿನ ಕಲ್ಯಾಣನಗರದಲ್ಲಿ ಇರುವ ಮನೆ ನಂ.22 ನ್ನು ಖರೀದಿ ಮಾಡಿದ್ದು ಈ ಬಗ್ಗೆ ಸದರಿ ಕ್ರಯಪತ್ರವನ್ನು ನಾನು ತಯಾರು ಮಾಡಿಕೊಟ್ಟಿರುತ್ತೇನೆ. ಸದರಿ ಕ್ರಯಪತ್ರಕ್ಕೆ ಧರ್ಮೇಗೌಡ ಹಾಗೂ ಹೇಮಂತ್ ಎನ್ನುವವರು ಸಾಕ್ಷಿಯಾಗಿ ನನ್ನ ಸಮಕ್ಷಮ ಸಹಿಯನ್ನು ಮಾಡಿರುತ್ತಾರೆ. ಅದೇ ರೀತಿ ಸದರಿ ಕ್ರಯಪತ್ರಕ್ಕೆ ಧನಲಕ್ಷ್ಮಿ

ಸುಬ್ರಹ್ಮಣ್ಯ ಹಾಗೂ ಧನಲಕ್ಷ್ಮಿರವರ ಒಬ್ಬ ಮಗ ನನ್ನ ಸಮಕ್ಷಮ ಸಹಿಯನ್ನು ಹಾಕಿರುತ್ತಾರೆ. ಧನಲಕ್ಷ್ಮಿರವರ ಮಗನ ಹೆಸರು ಹೇಳಲು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಪ್ರಭಾರ ಎಪಿಪಿ ರವರಿಂದಃ-</u>

ಧನಲಕ್ಷ್ಮಿರವರ ಮಗನ ಹೆಸರು ರಾಮ್ ಕುಮಾರ್ ಎಂದು ಇರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ನಾನು ನಿಪಿ-2 ಕ್ರಯಪತ್ರವನ್ನು ತಯಾರು ಮಾಡುವ ಸಮಯದಲ್ಲಿ ಮುನಿಸಿಪಾಲಿಟಿ ಕೈಬರಹದ ಖಾತಾ ನಕಲು, ಹಕ್ಕುಪತ್ರ, ಆಧಾರ್ ಕಾರ್ಡ್ ಗಳನ್ನು ಪಡೆದಿರುತ್ತೇನೆ. ಸದರಿ ಮನೆಯು ಆಶ್ರಯ ಮನೆ ನಿವೇಶನ ಇತ್ತು ಎಂದರೆ ಸರಿ. ಸದರಿ ಹಕ್ಕುಪತ್ರದಲ್ಲಿ ಸದರಿ ಆಶ್ರಯ ಮನೆಯನ್ನು ಬೇರೆಯವರಿಗೆ ಪರಭಾರೆ ಮಾಡಬಾರದು ಎನ್ನುವ ಬಗ್ಗೆ ನಮೂದು ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಮನೆಯ ಕ್ರಯಪತ್ರ ಮಾಡಲು ಸದರಿ ಧನಲಕ್ಷ್ಮಿ ಹಾಗೂ ಸುಬ್ರಹ್ಮಣ್ಯರವರು ಅಭಿಪ್ರಾಯವನ್ನು ಪಡೆದುಕೊಂಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಹಕ್ಕುಪತ್ರದಲ್ಲಿ ಆಶ್ರಯ ಮನೆ ಪರಭಾರೆ ಮಾಡಬಾರದೆಂಬ ಷರತ್ತು ಇದ್ದರೂ ಕೂಡಾ ಅದನ್ನು ಉಲ್ಲಂಘಿಸಿ ನಾನು ಕ್ರಯಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿದಾರರು ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಧನಲಕ್ಷ್ಮಿರವರಿಗೆ ಸದರಿ ಮನೆಯನ್ನು

ಮಾರಾಟ ಮಾಡಲು ಹಕ್ಕು ಇಲ್ಲದೇ ಇದ್ದರೂ ಕೂಡಾ ಅದನ್ನು ತಿರುಚಿ ನಾನು ಒಂದು  ಸುಳ್ಳು ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ